ಕನ್ನಡಪ್ರಭ

Farmhouse in Bangalore
divinedevelopers.co.in
Near Kanakapura Just Rs 222/sqft with all amenities, Birds & Animals

# ಡೆಡ್ಲಿ ಸಿಟಿ!

## 25% ಗೆ ಇಳಿದ ಬೆಂಗಳೂರಿನ ಹಸಿರು ಹೊದಿಕೆ

**ಕನ್ನಡಪ್ರಭ ವಾರ್ತೆ | ಬೆಂಗಳೂರು | ಮೇ 8**

ಬೆಂಗಳೂರು 'ಗ್ರೀನ್‌ಸಿಟಿ' ಎನ್ನುವ ಅರ್ಹತೆ ಕಳೆದುಕೊಂಡಿದೆ. ನಿತ್ಯವೂ ಇಲ್ಲಿ ನಡೆಯುತ್ತಿರುವ ಮರಗಳ ಮಾರಣ ಹೋಮದಿಂದ ಹಸಿರೀಕರಣ ಬಹುತೇಕ ನಾಶವಾಗಿದೆ. ಪರಿಣಾಮವಾಗಿ 'ಡೆಡ್ಲಿ ಸಿಟಿ' ಎನ್ನುವ ಪಟ್ಟ ಹೊರುವಂತಾಗಿದೆ!

ಬೆಂಗಳೂರು ನಗರದಲ್ಲಿರುವ ಮರಗಳ ಕುರಿತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರ ತಂಡದ ಮೂಲಕ ನಡೆಸಿರುವ ತಾಂತ್ರಿಕ ಅಧ್ಯಯನದ ವರದಿಯಲ್ಲಿ ಈ ಆಘಾತಕಾರಿ ಸಂಗತಿ ಬಯಲಾಗಿದೆ. ಕಳೆದ ನಾಲ್ಕು ದಶಕಗಳಿಂದೀಚೆಗೆ ಆದ ಅವೈಜ್ಞಾನಿಕ ನಗರೀಕರಣದಿಂದಲೇ ಬೆಂಗಳೂರಿನ ಹಸಿರೀಕರಣ ನಾಶವಾಗಿದ್ದು, ಕೆರೆಗಳು ಮುಖ್ಯವಾಗಿ ಅಂತರ್ಜಲ ಪಾತಾಳಕ್ಕಿಳಿದಿದೆ. 1973ರ ಹೊತ್ತಿಗೆ ಶೇ.68.27ರಷ್ಟಿದ್ದ ಹಸಿರು ಹೊದಿಕೆ ಪ್ರಮಾಣ ಈಗ ಶೇ.25ಕ್ಕೆ ಇಳಿದಿದೆ. 1973ರಲ್ಲಿ ಶೇ.3.4ರಷ್ಟಿದ್ದ ಜಲಾವೃತ್ತ ಪ್ರದೇಶ ಇದು ಶೇ.1ರಷ್ಟಾಗಿದೆ. ಅಂತರ್ಜಲದ ಕುಸಿತ 800ರಿಂದ 1000 ಅಡಿಗಿಳಿದಿದೆ.

ಒಬ್ಬರಿಗೆ ಕನಿಷ್ಠ 5ರಿಂದ 6 ಮರದ ಅಗತ್ಯವಿದ್ದರೂ ಬೆಂಗಳೂರಿನಲ್ಲಿ ಒಬ್ಬರಿಗೆ ಈಗ ಕೊನೆ ಪಕ್ಷ ಒಂದು ಮರವೂ ಇಲ್ಲ. ಬಹುತೇಕ ಕಡೆಗಳಲ್ಲಿ ಮಾಲಿನ್ಯದಿಂದ ಉತ್ಪಾದನೆ ಆಗುತ್ತಿರುವ ಇಂಗಾಲ ಡೈ ಆಕ್ಸೈಡ್ ನಿಯಂತ್ರಣಕ್ಕೆ ಪರ್ಯಾಯ ಮಾರ್ಗಗಳೇ ಕಾಣುತ್ತಿಲ್ಲ. ಸದ್ಯ ಬೆಂಗಳೂರು ಹವಾಮಾನದಲ್ಲಿ ಸಾಕಷ್ಟು ಏರುಪೇರಾಗಿರುವುದಕ್ಕೆ ಹಸಿರೀಕರಣದ ನಾಶವೇ ಕಾರಣ ಎಂಬ ಮಾಹಿತಿಗಳನ್ನು ವರದಿ ಬಹಿರಂಗಪಡಿಸಿದೆ.

ಈ ವರದಿ ಪ್ರಕಾರ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಈಗಿರುವ ಮರಗಳ ಸಂಖ್ಯೆ 14,78,412. ಇಲ್ಲಿರುವ ಜನಸಂಖ್ಯೆಗೆ ಇದನ್ನು ಹೋಲಿಕೆ ಮಾಡಿದರೆ ಈ ಪ್ರಮಾಣ ಶೇ.15ರಷ್ಟು ಮಾತ್ರ. ಪರಿಸರ ಸಮತೋಲನದ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ ನೀಡಿರುವ ವೈಜ್ಞಾನಿಕ ವರದಿ ಪ್ರಕಾರ ಕನಿಷ್ಠ ಒಬ್ಬರಿಗೆ 9.5 ಚದರ ಮೀಟರ್ ಹಸಿರು ವಲಯ ಬೇಕು. ಅಂದರೆ ಒಬ್ಬರಿಗೆ 32ರಿಂದ 55 ಮರ. ಕನಿಷ್ಠವೆಂದರೂ 5ರಿಂದ 6. ಪ್ರತಿ ವ್ಯಕ್ತಿಯ ಆಮ್ಲಜನಕ ಹಾಗೂ ಆರೋಗ್ಯಾಧಾರಿತ ಸೇವೆಗೆ ಇದು ಅನಿವಾರ್ಯ ಕೂಡ. ಆದರೆ ಬೆಂಗಳೂರು ಇದಕ್ಕೆ ವ್ಯತಿರಿಕ್ತವಾಗಿದೆ.

ಅಧ್ಯಯನದ ತಂಡ ಪಾಲಿಕೆ ವ್ಯಾಪ್ತಿಯ ವಾರ್ಡ್‌ವಾರು ಮರಗಳ ಗಣತಿ ನಡೆಸಿದೆ. ಅಲ್ಲಿರುವ ಮರಗಳ ಜಾತಿವಾರು ವಿವರ, ಅಲ್ಲಿ ಹಿಂದಿದ್ದ ಮರಗಳು ನಾಶವಾಗಿದ್ದಕ್ಕೆ ಕಾರಣಗಳು, ಮರಗಳ ನಾಶದಿಂದ ಜನರ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ವರದಿಯಲ್ಲಿ ದಾಖಲಿಸಿದೆ.

**ಜನಸಂಖ್ಯೆಗೆ ಅನುಗುಣವಾಗಿ ಮರಗಳಿಲ್ಲದ್ದಕ್ಕೆ ಹವಾಮಾನದಲ್ಲಿ ವ್ಯತ್ಯಯ**

**5-6** ಮರಗಳು ಪ್ರತಿ ವ್ಯಕ್ತಿಗೆ ಇರಬೇಕು

### ಕಾರಣ ಏನು?

ಮರಗಳ ನಾಶದಿಂದ ನೀರು, ಗಾಳಿ ಮತ್ತು ಜನರ ಜೀವನದ ಗುಣಮಟ್ಟ ಇಲ್ಲಿ ಕೆಡುತ್ತಿರುವುದರ ಬಗ್ಗೆ ವರದಿ ಆತಂಕ ವ್ಯಕ್ತಪಡಿಸಿದೆ. ಇನ್ನು ಚಿಕ್ಕಪೇಟೆ, ಶಿವಾಜಿನಗರ, ಕೆಂಪಾಪುರ ಅಗ್ರಹಾರದಂತಹ ಇಕ್ಕಟ್ಟಿನ ಬಡಾವಣೆಗಳೂ ಸೇರಿದಂತೆ ನಗರದಲ್ಲಿ ಮರಗಳು ಮಾಯವಾಗಿರುವುದಕ್ಕೆ ರಸ್ತೆ ಅಗಲೀಕರಣ, ಅವೈಜ್ಞಾನಿಕ ನಗರೀಕರಣ, ಜನರ ನಿರ್ಲಕ್ಷ್ಯ, ಪರಿಸರದ ಕಾಳಜಿಯ ಕೊರತೆ, ಅಪಾರ್ಟ್‌ಮೆಂಟ್‌ಗಳ ಸ್ಥಾಪನೆ ಕಾರಣ ಎಂದು ವರದಿ ಹೇಳಿದೆ.

**500** ಜನರಿಗೆ ಇರುವುದು ಕೇವಲ **1 ಮರ**

### ಒಂದು ಮರದಿಂದ ವರ್ಷಕ್ಕೆ 6 ಕೆಜಿ ಇಂಗಾಲ ಹೀರಿಕೆ

ಪ್ರತಿ ಒಂದು ಮರ ವರ್ಷಕ್ಕೆ 6 ಕಿಲೋ ಗ್ರಾಂ ಇಂಗಾಲ ಹೀರಿಕೊಳ್ಳುವ ಸಾಮರ್ಥ್ಯ ಹೊಂದಿದೆ. ಆದರೆ ಒಬ್ಬ ವ್ಯಕ್ತಿ ವರ್ಷಕ್ಕೆ 192ರಿಂದ 328 ಕೆಜಿಯಷ್ಟು ಇಂಗಾಲವನ್ನು ಕೇವಲ ಉಸಿರಾಟದ ಮೂಲಕ ಬಿಡುಗಡೆ ಮಾಡುತ್ತಾನೆ. ಇಷ್ಟು ಪ್ರಮಾಣದ ಇಂಗಾಲವನ್ನು ನಿಯಂತ್ರಿಸಲು ಒಬ್ಬ ವ್ಯಕ್ತಿಗೆ 32ರಿಂದ 55 ಮರಗಳು ಬೇಕು. ಆದರೆ ಬೆಂಗಳೂರಿನಲ್ಲಿ ಒಬ್ಬರಿಗೆ ಒಂದೂ ಮರವೂ ಇಲ್ಲ.

**14,78,412** ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸದ್ಯ ಇರುವ ಮರಗಳು ಮಾತ್ರ

**800** ರಿಂದ **1000** ಅಡಿಗೆ ಇಳಿದ ಅಂತರ್ಜಲ

ಮಾಲಿನ್ಯ ನಿಯಂತ್ರಣ ಮಂಡಳಿಯು ಐಐಎಸ್ ತಜ್ಞರ ತಂಡದ ಜತೆ ನಡೆಸಿದ ಅಧ್ಯಯನದಿಂದ ಬಹಿರಂಗ

### ಒಬ್ಬರಿಗೆ ಒಂದು ಮರ' ಯೋಜನೆ ಜಾರಿಗೆ ಶಿಫಾರಸು

ಬೆಂಗಳೂರು ನಗರದ ಪರಿಸರವನ್ನು ಆರೋಗ್ಯಕರವಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಎಲ್ಲ ವಾರ್ಡ್‌ಗಳಲ್ಲೂ ಮರ ಬೆಳೆಸುವ ಕನಿಷ್ಠ 'ಒಬ್ಬರಿಗೆ ಒಂದು ಮರ' ಹಾಗೂ 'ಒಂದು ಮರ ಕಡಿದರೆ ಮೂರು ಮರ' ಬೆಳೆಸುವ ಯೋಜನೆಯನ್ನು ಕಡ್ಡಾಯವಾಗಿ ಜಾರಿಗೆ ತರುವಂತೆ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ.ವಾಮನ ಆಚಾರ್ಯ ಹೇಳಿದ್ದಾರೆ.

ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರ ತಂಡದ ಮೂಲಕ ನಡೆಸಿದ ಅಧ್ಯಯನದ ವರದಿಯ ವಿವರವನ್ನು ಸುದ್ದಿಗೋಷ್ಠಿಯಲ್ಲಿ ಬಹಿರಂಗಪಡಿಸಿದ ಅವರು, ಇಷ್ಟರಲ್ಲಿಯೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು. ನಗರೀಕರಣದ ಪ್ರಭಾವದಿಂದಾಗಿ ಬೆಂಗಳೂರು ನಗರದಲ್ಲಿ ವ್ಯಾಪಕವಾಗಿ ಮರಗಳನ್ನು ಕಡಿಯಲಾಗಿದೆ. ಈ ಹಿನ್ನೆಲೆಯಲ್ಲಿಯೇ ಮಂಡಳಿ 'ಒಬ್ಬರಿಗೆ ಒಂದು ಮರ' ಹಾಗೂ 'ಒಂದು ಮರ ಕಡಿದರೆ ಮೂರು ಮರ' ಬೆಳೆಸುವ ಯೋಜನೆಯನ್ನು ಪ್ರಸ್ತಾಪಿಸಿದ್ದು, ಇದನ್ನು ಸರ್ಕಾರಕ್ಕೆ ಸಲ್ಲಿಸುವ ಮೂಲಕ ಯೋಜನೆ ಜಾರಿಗೆ ಒತ್ತಡ ತರಲಿದೆ ಎಂದರು.

### ಶಿವಾಜಿನಗರ ಸುತ್ತ 100 ಮರ

ವಾರ್ಡ್‌ವಾರು ವಿವರಗಳ ಪೈಕಿ ವರ್ತೂರು, ಬೆಳ್ಳಂದೂರು, ಅರಮನೆ ನಗರ ಹಾಗೂ ಆಗರ ವಾರ್ಡ್‌ಗಳು ಹೆಚ್ಚು, ಅಂದರೆ ತಲಾ 40 ಸಾವಿರಕ್ಕೂ ಹೆಚ್ಚು ಮರಗಳನ್ನು ಹೊಂದಿವೆ. ಕನಿಷ್ಠ ಒಬ್ಬರಿಗೆ ಒಂದು ಮರದ ಸೇವೆಯ ಲಭ್ಯತೆ ಇದೆ. ಉಳಿದಂತೆ ಬಹುತೇಕ ವಾರ್ಡ್‌ಗಳು ಇದಕ್ಕಿಂತ ಸ್ವಲ್ಪ ಕಡಿಮೆ ಎನ್ನುವ ಗುಂಪಿಗೆ ಸೇರಿದರೆ, ಚಿಕ್ಕಪೇಟೆ, ಶಿವಾಜಿನಗರ, ಕೆಂಪಾಪುರ ಅಗ್ರಹಾರ, ಬಾಪೂಜಿನಗರ, ಕುಶಾಲನಗರ ವಾರ್ಡ್‌ಗಳಲ್ಲಿ ಅತ್ಯಂತ ಕಡಿಮೆ, ತಲಾ 100ಕ್ಕಿಂತ ಕಡಿಮೆ ಮರಗಳಿರುವುದು ಕಂಡು ಬಂದಿದೆ. ಇಲ್ಲಿ 500 ಜನರಿಗೆ ಒಂದು ಮರವೇ ಗತಿಯಾಗಿದೆ. ಒಟ್ಟಾರೆ ಬೆಂಗಳೂರಿನ ಜನಸಂಖ್ಯೆಗೆ ಅನುಗುಣವಾಗಿ ಲಭ್ಯವಿರುವ ಮರದ ಸಾಂದ್ರತೆ ಶೇ.014 ಮಾತ್ರ.

ಗುರುವಾರ ಸುದ್ದಿಗೋಷ್ಠಿಯಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ. ವಾಮನ ಆಚಾರ್ಯ ಅವರು ಅಧ್ಯಯನದ ವರದಿಯ ಪುಸ್ತಕ ಬಿಡುಗಡೆ ಮಾಡಿದ ನಂತರ ಟಿ.ವಿ. ರಾಮಚಂದ್ರ ವರದಿಯ ವಿವರ ನೀಡಿದರು. ಭಾರತೀಯ ವಿಜ್ಞಾನ ಸಂಸ್ಥೆಯ ಜೀವ ವಿಜ್ಞಾನ ವಿಭಾಗದ ಭರತ್ ಐತಾಳ್, ಗೌರಿ ಕುಲಕರ್ಣಿ, ವಿನಯ್ ಅವರನ್ನೊಳಗೊಂಡ ತಂಡ ನಾಲ್ಕು ತಿಂಗಳ ಕಾಲ ಈ ಅಧ್ಯಯನ ನಡೆಸಿದೆ.

> 4 ದಶಕಗಳ ಈಚೆಗೆ ಶೇ.584 ರಷ್ಟು ನಗರೀಕರಣದಿಂದಾಗಿ ಶೇ.66ರಷ್ಟು ಮರಗಳು ಹಾಗೂ ಶೇ.74 ರಷ್ಟು ಜಲ ಮೂಲಗಳು ನಾಶವಾಗಿದೆ. ದೇಶದ ಇತರೆ ನಗರಗಳಿಗೆ ಹೋಲಿಕೆ ಮಾಡಿದರೆ ಬೆಂಗಳೂರಿನಲ್ಲಿರುವ ಪರಿಸರ ಸಾಕ್ಷರತೆ ಪ್ರಮಾಣ ಕೂಡ ತೀರಾ ಕಡಿಮೆ. ಅಧ್ಯಯನದ ಪ್ರಕಾರ ಶೇ.3.5ರಷ್ಟು.
>
> ■ ಟಿ.ವಿ. ರಾಮಚಂದ್ರ, ಅಧ್ಯಯನ ತಂಡದ ಮುಖ್ಯಸ್ಥ

> 'ಒಬ್ಬರಿಗೆ ಒಂದು ಮರ' ಯೋಜನೆ ಕೇವಲ ಬೆಂಗಳೂರು ಮಾತ್ರವಲ್ಲ, ಹುಬ್ಬಳ್ಳಿ, ಮಂಗಳೂರು ಸೇರಿದಂತೆ ರಾಜ್ಯದ ಇತರೆ ಕಡೆಗಳಲ್ಲೂ ಜಾರಿಗೆ ತರಬೇಕು. ಈ ಎಲ್ಲ ವಿಚಾರಗಳನ್ನು ವರದಿಯಲ್ಲಿ ಶಿಫಾರಸು ಮಾಡಲಾಗುವುದು.
>
> ■ ಡಾ.ವಾಮನ ಆಚಾರ್ಯ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

Apartment Bangalore
brookwoods.in/pashmina-bangalore/
Limited Period Offer, Pay 20% Now & Nothing till Possession. Know More!

Go To Article

Copyright and Trade Mark Notice © owned by or licensed to Kannada Prabha ePaper .

POWERED BY PRES